4294 (4955) ಶ್ರೀ ಅಪ್ಪಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳವಾಡ ಏತ ನೀರಾವರಿಗಾಗಿ 'ಎ' & 'ಬಿ' ಸ್ಕೀಂ ಯೋಜನೆಯಡಿ ಸರ್ಕಾರ ಕೈಗೊಂಡ ಕಾಮಗಾರಿಗಳು ಯಾವುವು;

ಆ) ಈ ಯೋಜನೆಯಿಂದ ನೀರಾವರಿಗೊಳಪಡುವ ಪ್ರದೇಶಗಳು ಯಾವುವು; (ತಾಲ್ಲೂಕುವಾರು ಹಾಗೂ ಎಕರೆವಾರು ವಿವರ ನೀಡುವುದು);

ಇ) ಬಿಜಾಪುರ ಜಿಲ್ಲೆಯಲ್ಲಿ ಈ ನೀರಾವರಿ ಯೋಜನೆಯ ವ್ಯಾಪ್ತಿಯಿಂದ ವಂಚಿತವಾಗಿರುವ ಪ್ರದೇಶಗಳು ಯಾವುವು; (ತಾಲ್ಲೂಕುವಾರು ಹಾಗೂ ಎಕರೆವಾರು ವಿವರ ನೀಡುವುದು);

ಈ) ನೀರಾವರಿ ಯೋಜನೆಯಿಂದ ವಂಚಿತವಾಗಿರುವ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಅಥವಾ ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಯಾವ ಯೋಜನೆಯನ್ನು ಹಾಕಿಕೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಮುಳವಾಡ ಏತ ನೀರಾವರಿ ಯೋಜನೆಯ ಸ್ಕೀಂ–ಎ ಅಡಿಯಲ್ಲಿ 30,850 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಗೆ ಒಳಪಡಿಸಲು ಸಂಬಂಧಪಟ್ಟಂತೆ ಜಾಕ್‌ವೆಲ್ ಪಂಪಿಂಗ್ ಸಿಸ್ಟಂ ಮತ್ತು ಕಾಲುವೆ–ಡಿಸ್ಟ್ರಿಬ್ಯೂಟರಿ ಜಾಲದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ತಾಲ್ಲೂಕುವಾರು ಮತ್ತು ಹೆಕ್ಟೇರು/ಎಕರೆವಾರು ವಿವರಗಳು ಈ ಕೆಳಗಿನಂತಿವೆ

1) ಬ.ಬಾಗೇವಾಡಿ ತಾ: 16,660 ಹೆ. (41150 ಎ)

2) ಬಿಜಾಪುರ ತಾ: 8,330 ಹೆ. (20575 ಎ)

3) ಜಮಖಂಡಿ ತಾ: 5,860 ಹೆ. (14474 ಎ)

ಇ) ಮುಳವಾಡ ಏತ ನೀರಾವರಿ ಯೋಜನೆಯಿಂದ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಮತ್ತು ಬಿಜಾಪುರ ತಾಲ್ಲೂಕುಗಳಲ್ಲಿ ಮೇಲೆ ತಿಳಿಸಿರುವಂತೆ ಕ್ಷೇತ್ರಗಳು ನೀರಾವರಿಗೆ ಒಳಪಡುತ್ತವೆ. ಅಲ್ಲದೇ, ಸಿಂಧಗಿ, ಇಂಡಿ, ಮುದ್ದೇಬಿಹಾಳ ಮತ್ತು ಬ.ಬಾಗೇವಾಡಿ ತಾಲ್ಲೂಕುಗಳಲ್ಲಿ 1,52,929

ಹೆಕ್ಟೇರ್ ಪ್ರದೇಶವು ಆಲಮಟ್ಟಿ ಎಡದಂಡೆ ಕಾಲುವೆ, ಇಂಡಿ ಏತ ನೀರಾವರಿ ಮತ್ತು ಇಂಡಿ ಶಾಖಾ ಕಾಲುವೆಗಳಿಂದಲೂ ಸಹ ನೀರಾವರಿಗೆ ಒಳಪಡುತ್ತವೆ.

ಈ) ವಂಚಿತವಾಗಿರುವ ಪ್ರದೇಶಗಳಿಗೆ ಸ್ಕೀಂ-ಬಿ ಅಡಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಚಿಮ್ಮಲಗಿ ಏತ ನೀರಾವರಿ, ಮುಳವಾಡ ಏತ ನೀರಾವರಿ ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಒಟ್ಟು 2.61 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲು ತಾತ್ಕಾಲಿಕವಾಗಿ ಯೋಜಿಸಲಾಗಿದೆ.

4295 (4936) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಸಂಪನ್ಮೂಲ ಇಲಾಖೆಯು ಕಳೆದ ಮೂರು ವರ್ಷಗಳಿಂದ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಬಾಕಿ ಮೊತ್ತವೆಷ್ಟು; (ವರ್ಷಾವಾರು, ಸಣ್ಣ, ಮಧ್ಯಮ ಹಾಗೂ ಭಾರೀ ನೀರಾವರಿ ಇಲಾಖಾವಾರು ವಿವರ ನೀಡುವುದು);

ಆ) ಈ ಮೊತ್ತವನ್ನು ಯಾವಾಗ ಪಾವತಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಜಲಸಂಪನ್ಮೂಲ ಇಲಾಖೆಯಲ್ಲಿ (ನಿಗಮಗಳು ಮತ್ತು ಸಣ್ಣ ನೀರಾವರಿ ಇಲಾಖೆ ಒಳಗೊಂಡು) ಕಳೆದ ಮೂರು ವರ್ಷಗಳಿಂದ ಗುತ್ತಿಗೆದಾರರಿಗೆ ಕೊಡಬೇಕಿರುವ ಮೊತ್ತ ಕೆಳಕಂಡಂತಿದೆ.

ಕಳೆದ ಮೂರು ವರ್ಷಗಳ ವಿವರ : (ರೂ.ಕೋಟಿಗಳಲ್ಲಿ)

ಇಲಾಖೆ	2002-03	2003-04	2004-05
ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ)	62.02	56.68	75.45
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)	122.09	128.68	78.06
ಒಟ್ಟು	184.11	185.36	153.51

ಆ) ಅನುದಾನ ಲಭ್ಯತೆಯಾನುಸಾರ ಗುತ್ತಿಗೆದಾರರ ಬಾಕಿ ಬಿಲ್ಲುಗಳನ್ನು ಪಾವತಿಸಲಾಗುವುದು.